# ಇಳಾ ಕಂಗಳಲಿ ಸಿನಿ ಮಿಂಚು

**'ಮರ್ಫಿ' ಸಿನಿಮಾದಿಂದ ತಮ್ಮದೊಂದು ಗುರುತು ಮೂಡಿಸಿರುವ ನಟಿ ಇಳಾ ವೀರಮಲ್ಲ, ರಂಗಭೂಮಿ ಪ್ರತಿಭೆ. ನಟನೆಯೊಂದಿಗೆ ನಿರ್ದೇಶನದೆಡೆಗೂ ತಮ್ಮ ರೆಕ್ಕೆ ವಿಸ್ತರಿಸಿಕೊಂಡಿರುವ ಅವರು ಸಹಾಯಕ ನಿರ್ದೇಶಕಿಯಾಗಿ ಪ್ರಯೋಗಕ್ಕಿಳಿದಿದ್ದಾರೆ.**



2012ರಲ್ಲಿ ತೆರೆಕಂಡಿದ್ದ 'ಬಾಲ್‌ಪೆನ್' ಎಂಬ ಮಕ್ಕಳ ಸಿನಿಮಾ ಮೂಲಕ ಚಿತ್ರರಂಗಕ್ಕೆ ಬಾಲನಟಿಯಾಗಿ ಎಂಟ್ರಿ ಕೊಟ್ಟವರು ಇಳಾ ವೀರಮಲ್ಲ. ಬಣ್ಣದ ಲೋಕದ ಬಗ್ಗೆ ಆಗ ಚಿಗುರಿದ್ದ ಕನಸು ನಂತರದ ದಿನಗಳಲ್ಲಿ ಅವರಿಗೆ ಹೊಸತೊಂದು ಹಾದಿಯನ್ನೇ ತೆರೆದಿಟ್ಟಿತ್ತು.

ಬೆಂಗಳೂರು ಅವರು ಹುಟ್ಟಿ ಬೆಳೆದ ಊರು. ಶಾಲೆಯ ಓದಿನ ಜೊತೆಗೆ ನಟನೆಯ ಕನಸು ಹೆಣೆದುಕೊಂಡೇ 'ಬಿಂಬ' ರಂಗತಂಡದಲ್ಲಿಯೂ ಮೂರು ವರ್ಷಗಳ ಕಾಲ ತರಬೇತಿ ಪಡೆದುಕೊಂಡರು. ಶಾಲಾ ಓದು ಮುಗಿಯುತ್ತಿದ್ದಂತೆ ಕಿರುತೆರೆಯಲ್ಲಿ ಅವಕಾಶಗಳು ಸಿಗಲು ಆರಂಭವಾದವು. ಧಾರಾವಾಹಿಗಳಲ್ಲಿ, ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳಲು ಆರಂಭಿಸುತ್ತಿದ್ದಂತೆ ಸಿನಿಮಾಗಳಲ್ಲಿ ನಟಿಸುವ ಅವಕಾಶಗಳೂ ತೆರೆದುಕೊಳ್ಳಲಾರಂಭಿಸಿದವು. 'ಶುಭಮಂಗಳ', 'ಸತ್ಯಹರಿಶ್ಚಂದ್ರ', 'ಘರ್ಷಣೆ' ಸಿನಿಮಾಗಳಲ್ಲಿ ಕಾಣಿಸಿಕೊಂಡರು.

ಕಾಲೇಜು ಓದುವಾಗ 'ಮರ್ಫಿ' ಸಿನಿಮಾದಲ್ಲಿ ನಟಿಸುವ ಅವಕಾಶ ಒದಗಿಬಂತು. 'ಮರ್ಫಿ' ಸಿನಿಮಾದಲ್ಲಿ ಮುಖ್ಯಪಾತ್ರವಾಗಿ ಕಾಣಿಸಿಕೊಂಡಿದ್ದು ಅವರೊಳಗಿನ ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತು.

''ಮರ್ಫಿ' ಸಿನಿಮಾದಲ್ಲಿ ನನಗೆ ಲೀಡ್ ಪಾತ್ರ ದೊರೆಯಿತು. ಆ ಸಿನಿಮಾ, ಸಿನಿಮಾರಂಗದ ಮೂಲಪಾಠಗಳನ್ನು ಹೇಳಿಕೊಟ್ಟಿತು. ಚಿತ್ರತಂಡ ಚಿಕ್ಕದಿದ್ದ ಕಾರಣ ಎಲ್ಲರೂ ಎಲ್ಲ ಕೆಲಸವನ್ನೂ ಮಾಡುತ್ತಿದ್ದೆವು. ನಟಿಸುವುದರೊಂದಿಗೆ ಬ್ಯಾಕ್‌ಸ್ಟೇಜ್ ಕೆಲಸಗಳನ್ನೂ ಮಾಡುತ್ತಿದ್ದೆವು. ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದ್ದೆ. ಜೊತೆಗೆ ಕಾಸ್ಟ್ಯೂಮ್ ಡಿಸೈನ್ ಮಾಡುವುದರ ಬಗ್ಗೆಯೂ ತಿಳಿದುಕೊಂಡಿದ್ದೆ. ಇದು ನಿರ್ದೇಶನದ ಬಗ್ಗೆ ನನ್ನಲ್ಲಿ ಕುತೂಹಲ, ಆಸಕ್ತಿ ಮೂಡಿಸಿತ್ತು'' ಎಂದು ತಮ್ಮ ಆಸಕ್ತಿಯ ಹಿನ್ನೆಲೆಯನ್ನು ವಿವರಿಸಿದರು ಇಳಾ.

'ಪ್ರತಿ ಕಲಾವಿದರೂ ನಿರ್ದೇಶನದಲ್ಲಿ ಸಣ್ಣ ಪ್ರಯತ್ನವನ್ನಾದರೂ ಮಾಡಬೇಕು. ಆಗ ಚಿತ್ರೀಕರಣದ ಸೆಟ್‌ನಲ್ಲಿ ಪ್ರತಿಯೊಬ್ಬರೂ ಎಷ್ಟು ಮುಖ್ಯ ಎಂಬುದು ಅರ್ಥವಾಗುತ್ತದೆ. ನಿರ್ದೇಶಕರ ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳಲು ನಟರಿಗೆ ಬಹಳ ಸಹಾಯವಾಗುತ್ತದೆ' ಎನ್ನುವ ಅವರಿಗೆ ನಟಿಯಾಗಿಯೂ ಹೆಸರು ಮಾಡುವ ಹಂಬಲ.

'ನಟಿಸಲು ಅವಕಾಶಗಳೇನೋ ಬಂದವು. ಆದರೆ ಒಬ್ಬ ನಟಿಯಾಗಿ ತೃಪ್ತಿ ನೀಡುವಂಥ ಪಾತ್ರಗಳು ಸಿಗುತ್ತಿಲ್ಲ. ಸಿನಿಮಾದಲ್ಲಿ 15 ನಿಮಿಷ ಸ್ಕ್ರೀನ್ ಟೈಂ ಇದ್ದರೂ ಅದು ವಾಸ್ತವಕ್ಕೆ ಹತ್ತಿರವಾಗಿರಬೇಕು ಎಂದು ಬಯಸುವವಳು ನಾನು. ಪಾತ್ರ ಪ್ರಯೋಗಕ್ಕೆ ನಾನು ಸಿದ್ಧ' ಎಂದು ತಮ್ಮ ನಿರೀಕ್ಷೆಗಳನ್ನು ಹಂಚಿಕೊಂಡರು. ನಿರ್ದೇಶನ ಕೂಡ ತಮ್ಮ ಕನಸಾಗಿದ್ದು, ಆ ಕನಸನ್ನು ನನಸಾಗಿಸುವ ಹಾದಿಯಲ್ಲಿ ಎಂದಿಗೂ ತಮ್ಮ ಪ್ರಯತ್ನ ಸಾಗುವುದಾಗಿ ಹೇಳುವ ಅವರಿಗೆ ಫ್ಯಾಂಟಸಿ ಕಥೆಗಳನ್ನು ಪರದೆ ಮೇಲೆ ಕಾಣಿಸುವ ಆಸೆ.

ಸದ್ಯ ದೊಡ್ಡ ಸಿನಿಮಾ ಪ್ರಾಜೆಕ್ಟ್ ಅವರ ಮುಂದಿದ್ದು, ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡುತ್ತಿದ್ದಾರೆ ಇಳಾ. ಹೊಸ ತಂಡದೊಂದಿಗೆ ಕೆಲಸ ಮಾಡುತ್ತಿದ್ದು, ಈ ಅನುಭವಗಳು ತಮ್ಮ ಸಿನಿ ಭವಿಷ್ಯಕ್ಕೆ ಕೊಡುಗೆಯಾಗುವ ಭರವಸೆ ಅವರದ್ದು.